sdmimd

# Kannadigara Prajaanudi

Date: 07-07-2019 Page No: 08

Edition: Mysuru Language: Kannada

## ಎಸ್‌ಡಿಎಮ್‌ಐಎಮ್‌ಡಿ ನಿರ್ದೇಶಕ ಡಾ. ಎನ್. ಆರ್. ಪರಶುರಾಮನ್ ಇ ಪಾಸ್ (EPAS) ಮಾನ್ಯತೆ ಮಂಡಲಿ ಸದಸ್ಯ



**ಮೈಸೂರು:** ಎಸ್‌ಡಿಎಮ್‌ಐಎಮ್‌ಡಿ ಸಂಸ್ಥೆಯ ನಿರ್ದೇಶಕ ಡಾ. ಎನ್. ಆರ್. ಪರಶುರಾಮನ್ ಅವರು ಯೂರೋಪಿಯನ್ ಫೌಂಡೇಶನ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ (EFMD)ನ ಇ ಪಾಸ್ (EPAS) ಮಾನ್ಯತೆ ಮಂಡಲಿಯ ಸದಸ್ಯರಾಗಿ ನೇಮಕಗೊಂಡಿದ್ದಾರೆ.

ಅವರು ಇ ಪಾಸ್ ಮಾನ್ಯತೆ ಮಂಡಲಿ ಸದಸ್ಯರಾಗಿ ಭಾರತದಿಂದ ಆಯ್ಕೆಯಾಗಿರುವ ಏಕಮಾತ್ರ ವ್ಯಕ್ತಿಯಾಗಿರುವರು.

ಒಂಭೈನೂರು (900) ಸದಸ್ಯ ಸಂಸ್ಥೆಗಳನ್ನು ಹೊಂದಿರುವ EFMDಯ ಇ ಪಾಸ್ ಒಂದು ಅಂತಾರಾಷ್ಟ್ರೀಯ ಮಾನ್ಯತೆ ನೀಡುವ ವ್ಯವಸ್ಥೆಯಾಗಿದೆ. ಇದರ ಮುಖ್ಯ ಕಚೇರಿಯು ಬ್ರಸ್ಸೆಲ್ಸ್ ನಗರದಲ್ಲಿ ಇದ್ದು, ಏಶಿಯ ಉತ್ತರ ಮತ್ತು ದಕ್ಷಿಣ ಅಮೆರಿಕಗಳಲ್ಲಿ ಕಚೇರಿಗಳನ್ನು ಹೊಂದಿದೆ.

ಎನ್. ಆರ್. ಪರಶುರಾಮನ್ ಅವರಿಗೆ ದೊರೆತಿರುವ ಈ ಗೌರವ ಎಸ್‌ಡಿಎಮ್ ಐಎಮ್‌ಡಿ ಸಂಸ್ಥೆ ಪಾಲಿಸುತ್ತಿರುವ ಉನ್ನತ ಗುಣಮಟ್ಟಗಳಿಗೆ ಉತ್ತಮ ಸಾಕ್ಷಿಯಾಗಿದೆ.